ಹೋಗೋದಕ್ಕೂ ಪುರಸೊತ್ತೇ ಕೊಡೋದಿಲ್ಲ ಜನ. ಮಾತಾಡ್ಬೇಕಾ ಒಂದ್ ಕೆಲ್ಸ ಮಾಡಿ ಮಧ್ಯ ಒಂದ್ ಸರ್ತಿ ಚಾಕ್ಕೆ ಬರ್ತಾನೆ. ಆಗ ಸಿಗ್ಬೌದು" ಮಾಲೀಕ ಕೌಂಟರಿಗೆ ವಾಪಸ್ಸಾದ. ಮಾಲೀಕನಿಗೆ ಮಾತು ಬೇಕಿತ್ತು. "ಆಚಾರಿಗೆ ಸಿಕ್ಕಾಪಟ್ಟೆ ಡಿಮಾಂಡು. ಈಗಂತು ಸಣ್ಣಾ ಪುಟ್ಟಾ ಊರಲ್ಲೂ ಸಂತೆ ಯಾಪಾರಲ್ರಾ. ಸಂತೆ ದಿನ ಮೊಕ್ಕಾಂ ಹಾಕಿದ್ರೆ ಆಯ್ತು ದುಡ್ಡ ಚೀಲದಲ್ಲಿ ತುಂಬ್ಕಬೇಕು."

ಬಾಂಕಿನ ಮೇಲೆ ಕೂತು ಗೋಡೆಗೊರಗಿ ದಂಪತಿಯ ದುಡಿಮೆ ನೋಡಿದೆ: ಸೊಂಟಕ್ಕೆ ಪಂಜಿ ಸುತ್ತಿದ ಆಚಾರಿ ಮೈ ಬೆವರಿ ಲೋಹದ ವಿಗ್ರಹದಂತೆ ಕಾಣುತ್ತಿದ್ದ. ಕೆಲಸದಲ್ಲಿ ಅವನು ಅಸಾಧಾರಣ ಸಂಯಮ ಮತ್ತು ತಲ್ಲೀನತೆಯನ್ನು ರೂಢಿಸಿಕೊಂಡಿದ್ದ. ಹತ್ಯಾರದ ಅಲಗನ್ನು ಏಕಾಗ್ರತೆಯಿಂದ ಸೂಕ್ಷ್ಮವಾಗಿ ಪರೀಕ್ಷಿಸಿ ಅದಕ್ಕೆ ಅಗತ್ಯವಾದ ಶಾಖವನ್ನು ಪಡೆಯಲು ಹೆಂಡತಿಗೆ ಯಾವ ಲಯದಲ್ಲಿ ಕುಲುಮೆಗೆ ಗಾಳಿ ಪೂರೈಸಬೇಕೆಂದು ಹೇಳಿದ. ಒಲೆಯ ಕೆಂಡದೊಡಲಲ್ಲಿಟ್ಟ ಕತ್ತಿಯನ್ನು ನಡುವೆ ಒಮ್ಮೆ ಹೊರ ತೆಗೆದು ನೋಡಿ ಮತ್ತೆ ನಿಗಿನಿಗಿ ಕೆಂಡದ ಕುಂಡದೊಳಗೆ ತೂರಿದ. ಕಾಯುತ್ತಿದ್ದವನಿಗೆ ನಡುವೆ ಬಿಡುವಿರಲಿಲ್ಲ; ಬಾಯೊಳಗಿನ ತಾಂಬೂಲವನ್ನು ರಸಗವಳವನ್ನಾಗಿಸಲು ರುಚಿಗಟ್ಟಾಗಿ ನುರಿನುರಿದು ಮೆಲ್ಲುವಂತೆ ದಂಪತಿ ತನ್ಮಯರಾಗಿದ್ದರು. ಕಾಲವನ್ನು ತಾಳದೆಣಿಕೆಯಲ್ಲಿ ಅಳೆಯುವಂತೆ ಧ್ಯಾನದಲ್ಲಿದ್ದ; ಹೆಂಡತಿಯ ನಿಶ್ಚಲ ಭಂಗಿಯಲ್ಲಿ ತಿದಿವೊತ್ತುವ ಹಸ್ತದ ಓಲಾಟ ಅಭಿನಯದಂತೆ ಭಾಸವಾಗುತ್ತಿತ್ತು. ಕುದಿಯುವ ಸೂರ್ಯನಂತೆ ಕೆಂಪಾದ ಕತ್ತಿಯನ್ನು ಹೊರ ತೆಗೆದು ಒಂದು ನಿರ್ದಿಷ್ಟ ಕೋನದಲ್ಲಿ ಕಲ್ಲಿನ ಮೇಲಿಟ್ಟು ಸುತ್ತಿಗೆಯಲ್ಲಿ ತಾಳ ತಪ್ಪದಂತೆ ಒಮ್ಮೆ ನಾಜೂಕಾಗಿ ಮತ್ತೊಮ್ಮೆ ಬಿರುಸಾಗಿ ಜಪ್ಪಿದ. ಸುತ್ತಿಗೆ ಅಲಗಿನುದ್ದಕ್ಕೆ ನರ್ತಕಿಯ ಹೆಜ್ಜೆಯಂತೆ ವಿವಿಧ ರೀತಿಯಲ್ಲಿ ತಾಡಿಸಿತು; ಮೇಣದಷ್ಟು ಮೆತ್ತಗಾದ ಅಲಗಿನ ಹೊರಒಳ ಮೈಯನ್ನು ತೆಳ್ಳಗಾಗಿಸುತ್ತ ಹರಿತಗೊಳಿಸಿತು; ಗಡುಸಾದ ಕತ್ತಿಯನ್ನು ಪುನಃ ಬೆಂಕಿಯಲ್ಲಿ ಕರಗಿಸಿ ಹೊಸ ರೀತಿಯಲ್ಲಿ ತಟ್ಟಿದ. ಮೂರು ಸಲ ಪಾತ್ರೆಯ ನೀರಿನಲ್ಲಿ ಕತ್ತಿಯನ್ನು ಮುಳುಗಿಸಿ ಚೊಂಯ್ಗುಡಿಸಿ ಹಬೆ ಹಾರಿಸಿದ. ಅವನೊಬ್ಬ ನಿಯತ್ತಿನ ಮನುಷ್ಯನಾಗಿರುವುದರಿಂದಲೊ ಅವನ ಹದಹಾಕುವಿಕೆಯ ಮಹಿಮೆಯನ್ನು ಅರಿತೊ ಜನ ಚೌಕಾಶಿ ಮಾಡದೆ ಮಜೂರಿ ಕೊಟ್ಟು ಹೋಗುತ್ತಿದ್ದರು. ಸುತ್ತಲೂ ಕಾಯುತ್ತಿದ್ದವರಿಗೆ ಕುಲುಮೆಯ ಬುಸುಬುಸು ಬೆಂಕಿಯ ಸದ್ದಿನ, ಟಣ ಠಣ ಜಪ್ಪುವ ಶಬ್ದದ ಅದೊಂದು ಯಾಂತ್ರಿಕವಾದ ಕೆಲಸಕ್ಕಿಂತ ಬೇರೇನೂ ಆಗಲು ಸಾಧ್ಯವಿರಲಿಲ್ಲ. ರಾಗ ಬದಲಾದಂತೆ ಪ್ರತಿ ಹೊಸ ಹತ್ಯಾರಕ್ಕೆ ಬೇರೆಯೇ ಆದ ತಾಳಲಯದ ವಿನ್ಯಾಸ ಹೊರಡುವ ಸ್ವರದಲ್ಲಿರುವುದನ್ನು ಗಮನಿಸುವುದು ಅಷ್ಟು ಸುಲಭದ್ದಾಗಿರಲಿಲ್ಲ. ನನಗಂತು ಕುಲುಮೆ ಶಾಲೆ ದಂಪತಿ ನಡೆಸಿಕೊಡುತ್ತಿರುವ ಸಂಗೀತ ಕಛೇರಿ ಎಂದೇ ಅನಿಸಿತು.

ಹೊರಗಿನಿಂದ ಕಾಣುವಷ್ಟು ಅವನ ಕೆಲಸ ಸರಳ ಎಂದು ನನಗೆ ಅನಿಸಲಿಲ್ಲ. ಬೆಂಕಿಗೆ ಕಾಯಿಸಿ ಕತ್ತಿಯನ್ನು ಬಡಿಯುವುದು ಮಾತ್ರವಾಗಿದ್ದರೆ ಮಂಜಾಚಾರಿಯೇ ಏಕೆ ಬೇಕಿತ್ತು ಯಾರಾದರೂ ಮಾಡಬಹುದಿತ್ತಲ್ಲ ಎಂದನಿಸಿತು. ಕಾರ್ಖಾನೆಯ ಯಂತ್ರಗಳು ಎಷ್ಟೇ ಆಧುನಿಕವಾಗಿದ್ದರೂ ಉತ್ಪಾದಿತ ಹತ್ಯಾರಗಳು ಕೆಲಸಕ್ಕೆ ಯೋಗ್ಯವಾಗಲು ಮಂಜಾಚಾರಿಯ ಕುಲುಮೆಯಲ್ಲಿ ಪುನರ್ಜನ್ಮ ಪಡೆದೇ ಹೋಗಬೇಕಲ್ಲ ಎಂದು ವಿಸ್ಮಯ ಎನಿಸಿತು. ಕಾರ್ಖಾನೆಯವರು ಮಂಜಾಚಾರಿಯ ಅಸಾಮಾನ್ಯ ತಂತ್ರವೊ ವಿದ್ಯೆಯೊ ಕೌಶಲ್ಯವೊ ಏನೋ ಒಂದು ನಿಗೂಢ ಶಕ್ತಿಯನ್ನು ಖರೀದಿಸಲು ಯತ್ನಿಸಿದರೆ ಅಚ್ಚರಿ ಪಡಬೇಕಾದ್ದಿಲ್ಲ ಎಂದನಿಸಿತು. ಹದದ ರಹಸ್ಯವನ್ನು